ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 256

3 ಜುಲೈ 2023 * ಸೋಮವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

ದ್ವಂದ್ವ ಗಾಯನ



ಚಿಲಕುಂದ ಸೋದರಿಯರು

ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್



ವಿದ್ವಾನ್ ಕೇಶವ ಮೋಹನ್‌ಕುಮಾರ್
ವಯೊಲಿನ್



ವಿದ್ವಾನ್ ಆನೂರು ವಿನೋದ್ ಶ್ಯಾಮ್
ಮೃದಂಗ



ವಿದ್ವಾನ್ ಎಸ್. ಮಂಜುನಾಥ್
ಘಟಂ

ಸರ್ವರಿಗೂ ಹಾರ್ದಿಕ ಸುಸ್ವಾಗತ

**ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಶ್ರೀ ಸಿ.ಎ. ನಾಗರಾಜ್ ಹಾಡುಗಾರಿಕೆ ಮತ್ತು ಕೊಳಲು ವಾದನದಲ್ಲಿ ನಿಪುಣರು. ತಾಯಿ ಶ್ರೀಮತಿ ಎಚ್.ಎಸ್. ರಾಧಾ ಸಂಗೀತಗಾರರು. ಲಕ್ಷ್ಮಿ ಮತ್ತು ಇಂದುರವರು "ಚಿಲಕುಂದ ಸೋದರಿಯರು" ಎಂದು ಪ್ರಸಿದ್ಧರಾಗಿದ್ದಾರೆ. ಸುಮಾರು ಮೂರು ವರ್ಷದವರಾಗಿದ್ದಾಗಲೇ ಅಜ್ಜಿ ಶ್ರೀಮತಿ ಸಿ.ಎಸ್. ಸತ್ಯಲಕ್ಷ್ಮಿಯವರಿಂದ ಪ್ರಾರಂಭಿಕ ಸಂಗೀತ ಶಿಕ್ಷಣ. ಎಳೆಯ ವಯಸ್ಸಿನಲ್ಲಿಯೇ ಹಲವಾರು ಪ್ರಶಸ್ತಿಗಳನ್ನು ಗಳಿಸಿದರು. ಒಂಬತ್ತನೆಯ ವಯಸ್ಸಿಗೇ ಕಚೇರಿ ನೀಡಿದ್ದಲ್ಲದೆ ಹಲವಾರು ದೂರದರ್ಶನ ವಾಹಿನಿಗಳಲ್ಲಿ ಕಾರ್ಯಕ್ರಮ ನೀಡಿದರು. ಸುಪ್ರಸಿದ್ಧ ಸಂಗೀತ ದಿಗ್ಗಜರೊಡನೆ ವೇದಿಕೆ ಹಂಚಿಕೊಂಡರು. ಕನ್ನಡ ಚಲನಚಿತ್ರ ಮತ್ತು ಕಿರುತೆರೆಗಳಲ್ಲಿ ಹಿನ್ನೆಲೆ ಗಾಯಕರಾಗಿ ಹಾಡಿದ್ದಾರೆ.

ಶ್ರೀ ಎಸ್.ಪಿ. ಬಾಲಸುಬ್ರಹ್ಮಣ್ಯಂರವರು ನಡೆಸಿಕೊಟ್ಟ ಈ ಟಿವಿ ವಾಹಿನಿಯ "ಎದೆ ತುಂಬಿ ಹಾಡುವೆನು" ಕಾರ್ಯಕ್ರಮದಲ್ಲಿ 2005 ಮತ್ತು 2006ನೇ ಸಾಲಿನಲ್ಲಿ ಸತತವಾಗಿ ವಿಜಯಿಗಳಾಗಿದ್ದಾರೆ. ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆಗಾಗಿ 2009ರಲ್ಲಿ ಆರ್ಯಭಟ ಪ್ರಶಸ್ತಿ ಲಭಿಸಿದೆ. ಜೀ ವಾಹಿನಿಯ "ಸರಿಗಮಪ" ಸಂಗೀತ ಕಾರ್ಯಕ್ರಮದಲ್ಲಿ "ಮೆಂಟರ್" ಆಗಿಯೂ ಇವರು ಕಾರ್ಯ ನಿರ್ವಹಿಸಿರುವರು.

ವಿದುಷಿ ಲಕ್ಷ್ಮಿಯವರು ಕರ್ನಾಟಕ ಸಂಗೀತದಲ್ಲಿ ಆಕಾಶವಾಣಿಯ "ಎ" ಶ್ರೇಣಿ, ಹಿಂದೂಸ್ತಾನಿ ಸಂಗೀತದಲ್ಲಿ ಬಿ–ಹೈ ಶ್ರೇಣಿ ಕಲಾವಿದರು; ಹಿಂದೂಸ್ತಾನಿ ಸಂಗೀತದಲ್ಲಿ ಪಂ. ಪರಮೇಶ್ವರ ಹೆಗ್ಡೆಯವರು ಇವರ ಗುರುಗಳು. ರಾಷ್ಟ್ರೀಯ ಸಂಗೀತ ಸ್ಪರ್ಧೆಯಲ್ಲಿ ಬಹುಮಾನಿತರು; ಸ್ವರಸಾಮ್ರಾಟ್ ಬಸವರಾಜ ರಾಜಗುರು ಪ್ರಶಸ್ತಿ ಗಳಿಸಿದ ಕರ್ನಾಟಕ ಸಂಗೀತ ಕಲಾವಿದರು.

ವಿದುಷಿ ಇಂದು ನಾಗರಾಜ್‌ರವರು ಚಲನಚಿತ್ರ ಸಂಗೀತಕ್ಕಾಗಿ ಫಿಲಂ ಫೇರ್ ಪ್ರಶಸ್ತಿ, ಉದಯ ಫಿಲಂ ಪ್ರಶಸ್ತಿ, ರೇಡಿಯೋ ಮಿರ್ಚಿ ಪ್ರಶಸ್ತಿ, ಬಿಗ್ ಎಫ್‌ಎಂ ಪ್ರಶಸ್ತಿ ಮತ್ತು ಟೈಮ್ಸ್ ಆಫ್ ಇಂಡಿಯಾ ಪ್ರಶಸ್ತಿಗಳಿಗೆ ಭಾಜನರು. ಸುಮಾರು 500ಕ್ಕೂ ಹೆಚ್ಚು ಚಲನಚಿತ್ರ ಗೀತೆಗಳನ್ನು ಹಾಡಿದ್ದಾರೆ. ಕಲರ್ಸ್ ಟಿ.ವಿ. ವಾಹಿನಿಯ "ಹಾಡು ಕರ್ನಾಟಕ"ದ ತೀರ್ಪುಗಾರರಲ್ಲೊಬ್ಬರು.

**ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ರವರು** ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರ ಶಿಷ್ಯರು. ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ವಯೊಲಿನ್ ವಾದನದಲ್ಲಿ ಬಿ–ಹೈ ಶ್ರೇಣಿ ಕಲಾವಿದರು. 2002ರಲ್ಲಿ ಎಂ.ಎಸ್. ಸುಬ್ಬಲಕ್ಷ್ಮಿ ಫೆಲೊಶಿಪ್‌ಗೆ ಭಾಜನರು. ಪ್ರಧಾನ ಕಲಾವಿದರಾಗಿ ಹಾಗೂ ಸಾಥೀದಾರರಾಗಿ ಹಲವಾರು ಪ್ರತಿಷ್ಠಿತ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

**ವಿದ್ವಾನ್ ಆನೂರು ವಿನೋದ್ ಶ್ಯಾಮ್‌ರವರು** ಅವರ ಮನೆತನದಲ್ಲಿ ಐದನೆಯ ತಲೆಮಾರಿನ ಕಲಾಪ್ರತಿಭೆ. ಮೃದಂಗವಲ್ಲದೆ ತಬಲ, ಢೋಲಕ್, ಪಖ್‌ವಾಜ್, ಢೋಲ್ಕಿ, ಖಂಜಿರ ಮುಂತಾದ ಲಯವಾದ್ಯಗಳನ್ನು ಸಮರ್ಥವಾಗಿ ನುಡಿಸಬಲ್ಲ ಹಸ್ತಕೌಶಲ. ವಿದ್ವಾನ್ ರುದ್ರಪಟ್ಟಣಂ ಸತ್ಯಕುಮಾರ್‌ರವರ ಬಳಿ ಮೃದಂಗ ಕಲಿಕೆಯ ಆರಂಭ. ಪ್ರಸ್ತುತ ತಂದೆ ಖ್ಯಾತ ಕಲಾವಿದ ಆನೂರು ಅನಂತಕೃಷ್ಣ ಶರ್ಮರ ಬಳಿ ಮೃದಂಗವಾದನದ ಪ್ರೌಢ ಅಭ್ಯಾಸ. ರೇಡಿಯೋ ಮತ್ತು ದೂರದರ್ಶನದ "ಎ" ಶ್ರೇಣಿ ಕಲಾವಿದರು. ಶ್ರೀರಾಮ ಲಲಿತ ಕಲಾಮಂದಿರದ "ರಾಗಲಯಪ್ರಭ", ಮೃದಂಗವಾದನಕ್ಕಾಗಿ "ಕಲಾವಂತ" ಹಾಗೂ "ಅನನ್ಯ ನಾದಜ್ಯೋತಿ ಯುವ ಪುರಸ್ಕಾರ"ಗಳಿಗೆ ಭಾಜನರು. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತದ ಹಲವಾರು ದಿಗ್ಗಜರಿಗೆ ಸಾಥ್ ನೀಡಿದ್ದಾರೆ. ಜರ್ಮನಿಯ ಫ್ರಾಂಕ್‌ಫರ್ಟ್ ನಗರದಲ್ಲಿ ನಡೆದ ಬ್ರಾಸ್ ಬ್ಯಾಂಡ್‌ನಲ್ಲಿ ಭಾಗವಹಿಸಿದ ಹೆಗ್ಗಳಿಕೆ.

**ವಿದ್ವಾನ್ ಎಸ್. ಮಂಜುನಾಥ್‌ರವರು** ವಿದ್ವಾನ್ ಟಿ.ವಿ. ಭದ್ರಾಚಾರ್ ಮತ್ತು ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಕಳೆದ ಎರಡು ದಶಕಗಳಿಂದ ಘಟಂ ಮತ್ತು ಮೃದಂಗ ವಾದನವನ್ನು ಕಲಿತಿದ್ದಾರೆ. ಹಲವಾರು ಸಿ.ಡಿ. ಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಜೆಎಸ್‌ಎಸ್ ಸಂಸ್ಥೆಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 257

## 1 ಆಗಸ್ಟ್ 2023



**ಗಾಯನ**

ವಿದ್ವಾನ್ ಅಭಿಷೇಕ್ ರಘುರಾಂ



**ವಯೊಲಿನ್**

ವಿದ್ವಾನ್ ಆಲಂಕೋಡೆ ವಿ.ಎಸ್. ಗೋಕುಲ್



**ಮೃದಂಗ**

ವಿದ್ವಾನ್ ಯೆಲ್ಲಾ ವೆಂಕಟೇಶ್ವರರಾವ್



**ಘಟಂ**

ವಿದ್ವಾನ್ ಜಿ.ಎಸ್. ರಾಮಾನುಜಂ

---

ಫೋನ್: 0821–2548221, 2548223 * ಇಮೇಲ್: sutturmath@jssonline.org